ಜಿಜಿಟಿ ಜಿಟಿ ಮಳೆ ಸುರಿಯುತ್ತಿದ್ದ ಒಂದು ಸಂಜೆಯ ಹೊತ್ತಿನಲ್ಲಿ ತಮ್ಮ ಬೈಕನ್ನೇರಿ ವಿಳಾಸ ಹುಡುಕುತ್ತ ಬಂದ, ವಿಶ್ವನಾಥ ಮಂಜುಳಾ ದಂಪತಿ ಕೊಂಚ ಭಯ ಮಿಶ್ರಿತ ಖುಷಿಯ ಸಂಭ್ರಮದಲ್ಲೇ ಸಂಜೀವಿನಿ ಕಟ್ಟಡದ ಮೂರನೇ ಅಂತಸ್ತಿನ ಗ್ರಾನೈಟಿನ ಅಗಲ ಮೆಟ್ಟಿಲುಗಳನ್ನು ಏದುಸಿರು ಬಿಡುತ್ತಲೇ ಏರತೊಡಗಿದರು. ಮಳೆಯಲ್ಲಿ ತೊಯ್ದು ರಂಗುಗೆಡುವ ಬಿಸಾತೂ ಇಲ್ಲದೇ ಮಂಜುಳಾ ತನ್ನ ಅಣ್ಣನ ಮಗನ ಮದುವೆಗೆ ಕೊಂಡ ಜರತಾರಿ ಸೀರೆಯನ್ನೇ ಉಟ್ಟುಕೊಂಡಿದ್ದಳು. ಯಾತಕ್ಕಾದರೂ ಇರಲಿ, ನಮಗೆ ಬಹುಮಾನ ಬಂದಿದೆಯಂತೆ, ಅದನ್ನು ತೊಗೊಳ್ಳಲು ಸಾದಾ ಸೀರೆ ಉಟ್ಟು ಯಾಕೆ ಬರುವದು, ಪತ್ರಿಕೆಯವರು ಟೀವಿಯವರು ಯಾರ‍್ಯಾರು ಬರುತ್ತಾರೆ ಗೊತ್ತಾಗುವುದಿಲ್ಲ, ನಾಳಿನ ಪತ್ರಿಕೆಯಲ್ಲಿ ಬಂದ್ರೂ ಬರಬಹುದು ಅಲ್ವೇನ್ರೀ? ಎನ್ನುತ್ತ ಗಂಡನಿಗೂ ಒಪ್ಪುವ ನೀಲಿ ಬಣ್ಣದ ಫುಲ್‌ಶರ್ಟು ತೊಡಲು ಹೇಳಿ ಕರೆತಂದಿದ್ದಳು.

'ಸಂದೇಶ್ ಅಂತ, ನಾವು ದೇಸಿ ಕ್ಲಬ್‌ನಿಂದ ಮಾತಾಡ್ತಿರೋದು, ಶೈನಿಂಗ್ ಬಜಾರಿನಲ್ಲಿ ನೀವು ಫಿಲ್‌ಅಪ್ ಮಾಡಿದ ಕೂಪನ್‌ಗೆ ಲಾಟರಿ ಎತ್ತಿದಾಗ ನಿಮ್ಮ ಫೋನ್ ನಂಬರ್‌ಗೆ ಬಹುಮಾನ ಬಂತು, ನಿಮಗೊಂದು ಗಿಫ್ಟ್ ಇದೆ, ಇಂಥ ದಿನ ಇಂಥ ಸಮಯ, ಬರಲೇಬೇಕು ನೀವು ಪತ್ನೀ ಸಮೇತರಾಗಿ' ಅಂತ ಹೇಳಿದ ಆ ಮಧುರವಾದ ಫೋನಿನ ದನಿ ಇನ್ನೂ ವಿಶ್ವನಾಥನ ಕಿವಿಯಲ್ಲಿ ಅನುರಣಿಸುತ್ತಿತ್ತು. ಆಗಲೇ ಸಂದೇಶ್ ಲಾಟರಿ ಅಂತ ಆ ನಂಬರನ್ನು ವಿಶ್ವನಾಥ ತನ್ನ ಮೊಬೈಲ್‌ನಲ್ಲಿ ಫೀಡ್ ಸಹ ಮಾಡಿಕೊಂಡಿದ್ದ. ಅದೇ ಧ್ಯಾನದಲ್ಲಿ ವಿಶ್ವನಾಥ ತಲೆಗೆ ಹಾಕಿದ ಹೆಲ್ಮೆಟ್ ತೆಗೆಯುವದನ್ನೇ ಮರೆತುಬಿಟ್ಟಿದ್ದ. ಈಗ ಒಮ್ಮೆಲೇ ತಲೆ ಬೆವೆತ ಅನುಭವವಾಗಿ ನಿಧಾನ ಗದ್ದದ ಬಳಿಯ ಬಕ್ಕಲ್ ಕಳಚಿ ಹೆಲ್ಮೆಟ್ ತೆಗೆದು ಹಿಡಿದುಕೊಂಡಾಗ, ಅದರ ಮುಂಭಾಗಕ್ಕೆ ನೀರ ಮಣಿಗಳ ಮಾಲೆ ಕಟ್ಟಿ ನಿಂತಿತ್ತು. ಅದು ವಜ್ರದ ಹರಳಿನಂತೆ ಥಳ ಥಳ ಹೊಳೆಯುತ್ತಿತ್ತು. ಅದನ್ನು ಹಾಗೇ ತೋರುಬೆರಳಲ್ಲಿ ಒರೆಸಿ ಪಕ್ಕದ ಗೋಡೆಗೆ ಸಿಂಪಡಿಸಿದ. ಗೋಡೆಯಿಂದ ಕೆಳಗಿಳಿದ ಹನಿಗಳು ತೊಯ್ದ ಒಂದೆರಡು ಗೆರೆ ಮೂಡಿಸಿದವು.

ಮೇಲೇರಿದ ಕೊನೆಯ ಮೆಟ್ಟಿಲಿಂದ ಹೆಜ್ಜೆ ತೆಗೆದು ಮುಂದಿಡುವಷ್ಟರಲ್ಲಿ ಬಿಳೀ ಶರ್ಟು ನೀಲಿ ಪ್ಯಾಂಟಿನ ಸಮವಸ್ತ್ರದಲ್ಲಿರುವ ಒಬ್ಬ ಯುವಕ 'ಹೆಲೋ ಸರ್, ಹೆಲೋ ಮ್ಯಾಡಂ, ಕಂಟ್ರಿ ಕ್ಲಬ್ ಗೆಸ್ಟ್ ಅಲ್ವೇ? ಬನ್ನಿ' ಅಂತ ಸೆಲ್ಯೂಟ್ ಹೊಡೆದಿದ್ದ. ಆತ ಕತ್ತಿಗೆ ಬಿಗಿದುಕೊಂಡ ಟೈ ಗಾಳಿಗೆ ತುಸುವೇ ತುದಿ ಮಡಚುತ್ತ ಹಾರಾಡುತ್ತಿತ್ತು. ತಮ್ಮನ್ನು ಆಹ್ವಾನಿಸಿದ ಕಂಟ್ರಿ ಕ್ಲಬ್ಬಿನ ಸಿಕ್ಕಾ ಇರುವ ಟೈ ಅದು. ವಿಶ್ವನಾಥ ಅದರೊಳಗಿನ ಬರಹವನ್ನು ಸೂಕ್ಷ್ಮವಾಗಿ ಗಮನಿಸಿದ. ಆ ಯುವಕ ಎದುರಾದ ಒಂದು ಗಾಜಿನ ಬಾಗಿಲನ್ನು ದೂಡಿ ಒಳಕರೆದು ಒಂದು ಮೆತ್ತನೆಯ ಸೋಫಾದಲ್ಲಿ ಇಬ್ಬರನ್ನೂ ಕೂಡಿಸುತ್ತ ಅಲ್ಲೇ ಇರುವ ಗಾಜಿನ ಕೌಂಟರಿನತ್ತ ಮುಖ ಮಾಡಿ ಸಣ್ಣ ಸನ್ನೆ ಮಾಡಿ ಹೊರ ಹೊರಟ. ಕೈಯಲ್ಲಿರುವ ತೊಯ್ದ ಹೆಲ್ಮೆಟ್ಟು ಎಲ್ಲಿಡುವುದೆಂದೇ ತಿಳಿಯದ ವಿಶ್ವನಾಥ ಕೊಂಚ ಅನುಮಾನಿಸುತ್ತ ಎದುರಿನ ಗಾಜಿನ ಟೀಪಾಯಿಯ ಮೇಲೆ ಇರಿಸಿದ.

ಆಫೀಸು ಕೋಣೆಯಂತಿರುವ ಆ ಗಾಜಿನ ಚೇಂಬರಿನಿಂದ ಇನ್ನೊಬ್ಬ ಯುವಕ ಅವಸರದಲ್ಲಿ ಹೊರ ಬಂದು 'ಮಿಸ್ಟರ್ ವಿಶ್ವನಾಥ್? ಮಿಸೆಸ್ ಮಂಜುಳಾ ಅಲ್ಲವೇ?' ಅಂತ ಅತ್ಯಂತ ವಿನಯ ತುಂಬಿದ ದೇಹಭಾಷೆಯಲ್ಲಿ ಕೇಳಿದ್ದ. ಒಂದೇ ತರಹದ ಅವರ ಯೂನಿಫಾರ್ಮನ್ನು ದಿಟ್ಟಿಸುತ್ತ 'ಹೌದು' ಎನ್ನುತ್ತ ಎದ್ದು ನಿಂತ ವಿಶ್ವನಾಥನನ್ನು ಕೈ ಹಿಡಿದು ಕೂಡಿಸುತ್ತ 'ಅಯ್ಯೋ ಕೂಡಿ ಕೂಡಿ' ಎನ್ನುತ್ತ ಆ ತರುಣ ತನ್ನ ಕೈಯಲ್ಲಿರುವ ಫೈಲಿನಲ್ಲಿದ್ದ ಒಂದು ಹಾಳೆ ತೆಗೆದು 'ಇಲ್ಲಿ ನಡೆವ